ದಿನಾಂಕ 03-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಎ.ಎಲ್ ವಕೀಲರಿಂದಃ**

1. ನಿ.ಪಿ-1 ರ ಉತಾರವನ್ನು ನಾನು 2021 ರಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಪಡೆದಿರುತ್ತೇನೆ. ನಿ.ಪಿ-1 ರ ಉತಾರವನ್ನು ಪ್ರಸ್ತುತ ದಾವೆಯನ್ನು ದಾಖಲಿಸುವ ಸುಮಾರು 3 ರಿಂದ 4 ತಿಂಗಳ ಹಿಂದೆ ಪಡೆದಿರುತ್ತೇನೆ. 2021 ರಲ್ಲಿ ನಿ.ಪಿ-1 ರ ಉತಾರವನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖಾಸಿಂ ಸಾಬ್ ಅಲ್ಲಾವುದ್ದೀನ್ ರವರು ನನ್ನ ತಂದೆ. ನನ್ನ ಅಜ್ಜನ ಹೆಸರು ಅಲ್ಲಾವುದ್ದೀನ್ ಸಾಬ್. ಖಾಸಿಂ ಸಾಬ್ ರವರಿಗೆ ನನ್ನನ್ನು ಹೊರತುಪಡಿಸಿ 5 ಜನ ಹೆಣ್ಣು ಮಕ್ಕಳು ಇರುತ್ತಾರೆ. 1 ನೇ ವಾದಿಯು ನನ್ನ ತಾಯಿ ಆಗಿರುತ್ತಾರೆ.

2. ದಾವಾ ಆಸ್ತಿಗೆ ನನ್ನ ಮತ್ತು ಇತರ ವಾರಸುದಾರರ ಹೆಸರುಗಳನ್ನು ನಮೂದಿಸಿಕೊಳ್ಳಲು ಹಾನಗಲ್ಲನ ಮಿನಿ ವಿಧಾನಸೌದದಲ್ಲಿ ಅರ್ಜಿಯನ್ನು ಸಲ್ಲಿಸಿದ್ದೆ. ದಾವಾ ಆಸ್ತಿಯು ಪ್ರಸ್ತುತ ನನ್ನ ಮತ್ತು 1 ನೇ ವಾದಿಯ ಹೆಸರಿನಲ್ಲಿದ್ದು, ನನ್ನ ಸಹೋದರಿಯರ ಜಂಟಿ ಹೆಸರಿನಲ್ಲಿ ಇರುವುದಿಲ್ಲ. ನನ್ನ ಸಹೋದರಿಯರು ದಾವಾ ಆಸ್ತಿಯ ಮೇಲೆ ತಮ್ಮ ಹಕ್ಕನ್ನು ಬಿಟ್ಟುಕೊಟ್ಟ ಕಾರಣಕ್ಕೆ ಅವರ ಹೆಸರುಗಳನ್ನು ಉತಾರದಲ್ಲಿ ನಮೂದಿಸಿರುವುದಿಲ್ಲ. ದಾವಾ ಆಸ್ತಿಯ ಮೇಲೆ ಇದ್ದ ತಮ್ಮ ಹಕ್ಕನ್ನು ನನ್ನ ಸಹೋದರಿಯರು ಹಾನಗಲ್ಲನ ಮಿನಿ ವಿಧಾನಸೌದಕ್ಕೆ ಬಂದು ಸಹಿ ಮಾಡಿ ಬಿಟ್ಟು ಕೊಟ್ಟಿರುತ್ತಾರೆ. ನನ್ನ ಸಹೋದರಿಯರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಿಸ್ಸೇಯನ್ನು ನೀಡಿರುವುದಿಲ್ಲ. ನನ್ನ ಸಹೋದರಿಯರಿಗೆ ತಿಳಿಯದ ಹಾಗೆ ನಾನು ಮತ್ತು 1 ನೇ ವಾದಿಯು ನಿ.ಪಿ-2 ರ ವಾಟ್ನಿ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ಸಹೋದರಿಯರು ಅವರ ಹಕ್ಕುಗಳನ್ನು ಬಿಟ್ಟು ಕೊಟ್ಟಿರುವುದಿಲ್ಲ

ಮತ್ತು ಅವರು ನಿರಂತರವಾಗಿ ತಮ್ಮ ಹಿಸ್ಸೇಯನ್ನು ಕೇಳುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ ಅಹಮದ್ ಸಾಬ್ ಭಂಡಾರಿ ರವರಿಗೆ ಮಾರಾಟ ಮಾಡಿರುತ್ತಾರೆ ಆದ್ದರಿಂದ ಅದರಲ್ಲಿ ಹಿಸೇಯನ್ನು ಮಾಡಿಕೊಳ್ಳಲು ಬರುವುದಿಲ್ಲ ಎಂದು ನನಗೆ ಮತ್ತು 1 ನೇ ಪ್ರತಿವಾದಿಗೆ ನನ್ನ ಸಹೋದರಿಯರು ಹೇಳಿದ್ದರು ಎಂದರೆ ಸರಿಯಲ್ಲ.

3. ದಾವಾ ಆಸ್ತಿಯನ್ನು ನನ್ನ ತಂದೆ ಮಹಮದ್ ಖಾಸಿಂ ರವರು ದಿಃ 31-01-1981 ರಲ್ಲಿ ಅಹಮದ್ ಸಾಬ್ ಭಂಡಾರಿ ರವರಿಗೆ ಮಾರಾಟ ಮಾಡಿ ಅದಕ್ಕೆ ಸಂಬಂಧಿಸಿದಂತೆ ನೋಂದಾಯಿತ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ಹಸ್ತ ನಕಾಶೆಯನ್ನು ಹಾಜರು ಪಡಿಸಿರುತ್ತೇನೆ. ಹಸ್ತ ನಕಾಶೆಯಲ್ಲಿ ಪ್ರತಿವಾದಿಗಳಿಗೆ ಸೇರಿದೆ ಎನ್ನುವ ಆಸ್ತಿಯ ವಿಸ್ತೀರ್ಣವನ್ನು ನಾನು ಬರೆಸಿರುವುದಿಲ್ಲ. ಪ್ರತಿವಾದಿಯರ ಆಸ್ತಿಯ ಚಕ್ಕುಬಂದಿಯು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಮಾತ್ರ ಸರಕಾರಿ ರಸ್ತೆ ಇರುತ್ತದೆ. ದಾವಾ ಆಸ್ತಿಯ ಪಶ್ಚಿಮಕ್ಕೆ- ಅಬ್ದುಲ್ ರೆಹಮಾನ್ ಜಾಡುಕಾಶ್ ರವರ ಆಸ್ತಿ, ಪೂ- ಇಸ್ಮಾಯಿಲ್ ಭಂಡಾರಿ ರವರ ಆಸ್ತಿ, ಉ- ನನಗೆ ಮತ್ತು 1 ನೇ ವಾದಿಗೆ ಸೇರಿದ ಆಸ್ತಿ ಸಂಃ 3917 ಇದೆ. ಆಸ್ತಿ ಸಂಃ 3917 ರ ಉತ್ತರಕ್ಕೆ ರಸ್ತೆ ಇದೆ.

4. ಆಸ್ತಿ ಸಂಃ 3917 ರ ವಿಸ್ತೀರ್ಣ ಪೂ-ಪ- 122 ವರೆ ಅಡಿ ಮತ್ತು ಉ-ದ-119 ವರೆ ಅಡಿ ಇದೆ. ನಾನು ಮೇಲೆ ಹೇಳಿದ ದಾವಾ ಆಸ್ತಿಯ ಚಕ್ಕು ಬಂದಿ ಮತ್ತು ಆಸ್ತಿ ಸಂಃ 3917 ರ ವಿಸ್ತೀರ್ಣವನ್ನು ಸುಳ್ಳಿನಿಂದ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಓಣಿಯ ಹಿರಿಯರಾದ ಅಬ್ದುಲ್ ರಹೀಮುಲ್ಲಾ ಮತ್ತು ಅಬಿದಿನ್ ಮುಲ್ಲಾ ರವರು 3 ವರ್ಷಗಳ ಹಿಂದೆ ಪ್ರತಿವಾದಿಗಳಿಗೆ ತೊಂದರೆ ಕೊಡಬಾರದು ಎಂದು ಬುದ್ಧಿವಾದ ಹೇಳಿದ್ದರು. ನಮ್ಮ ಓಣಿಯಲ್ಲಿ ಸದರಿ ವ್ಯಕ್ತಿಗಳು ಪಂಚ ವ್ಯಕ್ತಿಗಳಲ್ಲ ಎಂದರೆ ಸರಿ. ಸಾಕ್ಷಿ

ಮುಂದುವರೆದು ಸದರಿಯವರು ನಮ್ಮ ಸಮಾಜದ ಹಿರಿಯ ವ್ಯಕ್ತಿಗಳು ಎಂದು ನುಡಿಯುತ್ತಾರೆ. ಸದರಿಯವರ ವಯಸ್ಸು ನನಗೆ ಗೊತ್ತಿಲ್ಲ. ಸದರಿಯವರ ಮನೆಗಳು ನಮ್ಮ ಆಸ್ತಿಯಿಂದ 2-3 ಮನೆಗಳ ನಂತರ ಬರುತ್ತವೆ. ಸದರಿ ವ್ಯಕ್ತಿಗಳು ನನಗೆ ತೊಂದರೆ ಕೊಡಬಾರದು ಎಂದು ಪ್ರತಿವಾದಿಗಳಿಗೆ ಯಾವುದೇ ಬುದ್ದಿ ಮಾತನ್ನು ಹೇಳಿರುವುದಿಲ್ಲ ಮತ್ತು ಬುದ್ದಿ ಮಾತನ್ನು ಹೇಳಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

5. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಸುಮಾರು 40-50 ವರ್ಷಗಳ ಹಿಂದಿನಿಂದಲೂ ಮನೆಯನ್ನು ಕಟ್ಟಿಕೊಂಡು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಹಾನಗಲ್ಲನ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆ ಆದಾಗ ನಾನು ಮತದಾನ ಮಾಡಿದ್ದೆ. ನನಗೆ ಸಂಬಂಧಿಸಿದ ಮತದಾನ ಗುರುತಿನ ಚೀಟಿಯಲ್ಲಿ ನಾನು ವಾಸ ಮಾಡುವ ಮನೆ ಸಂಖ್ಯೆ ಮತ್ತು ಅದರ ಸಂಪೂರ್ಣ ವಿಳಾಸ ಇದೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**SD/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ